ISSN:3048-7137

# ಆರಯ್

**ಕನ್ನಡ ಇಮ್ಮುಖ ಕುರುಡೋದು (Double Blind)**
**ಮತ್ತು ದಟ್ಟೋದು (Peer Review)**
**ಮೂರು ತಿಂಗಳ ಆನ್ಲಯಿನ್ ಸಂಶೋಧನಾ ಪತ್ರಿಕೆ**

ಸಂಪುಟ–೨ ಸಂಚಿಕೆ–೩

ಜುಲೈ-ಸೆಪ್ಟೆಂಬರ್ ೨೦೨೫

Kannada Online Double Blind Peer-Review Quarterly Research Journal

Volume-2, Number-3 July-September 2025

ಕಟ್ಟುಗ
ಬಸವರಾಜ ಕೋಡಗುಂಟಿ

ಬಂಡಾರ ಪ್ರಕಾಶನ
ಮಸ್ಕಿ

**ಆರಯ್**
ಕನ್ನಡ ಇಮ್ಮುಖ ಕುರುಡೋದು (Double Blind) ಮತ್ತು ದಟ್ಟೋದು
(Peer Review) ಮೂರು ತಿಂಗಳ ಆನ್ಲಯಿನ್ ಸಂಶೋಧನಾ ಪತ್ರಿಕೆ
ಸಂಪುಟ–೨, ಸಂಚಿಕೆ–೩, ಜುಲೈ–ಸೆಪ್ಟೆಂಬರ್ ೨೦೨೫
ISSN : 3048-7137

**ARAY**
Kannada Online Double Blind Peer-Review Quarterly
Research Journal
Volume-2, Number-3, July-September 2025
https://aray.in/

ಪುಟ/Pages : 130
ಹಕ್ಕು/@: ಪ್ರಕಾಶಕರು
ಬೆಲೆ/Price : **ರೂ. 50/–**

ಸಂಪಾದಕ
**ಪ್ರೊ. ಬಸವರಾಜ ಕೋಡಗುಂಟಿ**

ಅತಿಥಿ ಸಂಪಾದಕ
**ಪ್ರೊ. ಕೆ. ಶಾರದಾ**

ಸಲಹಾ ಮಂಡಳಿ
**ಪ್ರೊ. ಪುರುಷೋತ್ತಮ ಬಿಳಿಮಲೆ, ಪ್ರೊ. ನಟರಾಜ್ ಬೂದಾಳ್**
**ಪ್ರೊ. ಸತ್ಯನಾಥ್ ಟಿ.ಎಸ್. ಪ್ರೊ. ಶ್ರೀನಿವಾಸ ವಿ. ಪಾಡಿಗಾರ, ಪ್ರೊ. ಶ್ರೀಧರ್ ಎಸ್.ಎನ್.**

ಸಂಪಾದಕ ಮಂಡಳಿ
**ಪ್ರೊ. ಚೈತ್ರಾ ಪುಟ್ಟಸ್ವಾಮಿ, ಪ್ರೊ. ಮನು ವಿ ದೇವದೇವನ್**
**ಪ್ರೊ. ಗಿಲ್ ಬೆನ್–ಹೆರುತ್, ಪ್ರೊ. ತಾರಕೇಶ್ವರ್ ವಿ.ಬಿ., ಪ್ರೊ. ಪರಮಶಿವಮೂರ್ತಿ ಡಿ.ವಿ.**

ಕಾರ್ಯಕಾರಿ ಮಂಡಳಿ
**ಡಾ. ಮಲ್ಲೇಶಪ್ಪ ಸಿದ್ರಾಂಪುರ, ಡಾ. ರಾಮಕೃಷ್ಣ ಜಿ, ಡಾ. ಮಹಾಂತೇಶ ಪಾಟೀಲ್**
**ಡಾ. ಬಸಯ್ಯ ಸ್ವಾಮಿ, ಡಾ. ಮಧು ಬಿರಾದಾರ್, ಶ್ರೀ ರೇಣುಕಾ ಕೊಡಗುಂಟಿ**

ಪ್ರಕಾಶಕರು
**ಪರಶುರಾಮ ಕೋಡಗುಂಟಿ**
ಪ್ರಕಾಶಕ, ಬಂಡಾರ ಪ್ರಕಾಶನ
ಮಸ್ಕಿ–೫೮೪ ೧೨೪, ಜಿ. ರಾಯಚೂರು
ಕರೆ–೯೧ ೯೮೮೬೪ ೦೭೭೧೧
bandaraprakashana@gmail.com
https://bandaraprakashana.com

# ಪ ರಿ ವಿ ಡಿ


| | |
|---|---|
| ಜಾನಪದ ರಂಗಭೂಮಿಯಲ್ಲಿ ಮಹಿಳೆಯರ ಪಾತ್ರ<br>**ಗಂಗಾಧರ ದೈವಜ್ಞ** | **4-25** |
| ಕೇಳಿಕೆ ರಂಗಭೂಮಿ ಹಿನ್ನೆಲೆಯಲ್ಲಿ ಗಡಿಪ್ರದೇಶದ ಜನಪದ ರಂಗಪ್ರಕಾರಗಳು ಮತ್ತು ದ್ರಾವಿಡ ರಂಗಭೂಮಿಯ ಪರಿಕಲ್ಪನೆ<br>**ವೇಮಗಲ್ ನಾರಾಯಣಸ್ವಾಮಿ** | **26-49** |
| ಬಯಲಾಟದಲ್ಲಿ ಬಹು ಭಾಷಾ ಬಳಕೆ<br>**ಹೆಚ್.ಡಿ.ನರಸೇಗೌಡ** | **50-67** |
| ಬಯಲಾಟ ಕಲಾವಿದ ಜಡೆ ದೊಡ್ಡಬಸಪ್ಪ<br>**ಗಾದೆಪ್ಪ** | **68-78** |
| ಬಯಲಾಟಗಳಲ್ಲಿ ದ್ವಿ ಭಾಷಿಕತೆ<br>**ಇಮಾಮ್‌ಸಾಬ ಹಡಗಲಿ** | **79-87** |
| ಕನ್ನಡ ಬಯಲಾಟ ಪರಿಸರ ಮತ್ತು ಪ್ರೇರಣೆ<br>**ಹುಲುಗಪ್ಪ ಎನ್.ಎಚ್** | **88-99** |
| ತೊಗಲು ಗೊಂಬೆ ಆಟ<br>**ರುದ್ರಮುನಿ ಹೀರೆಮಠ** | **100-117** |
| ಕೋಲಾರ ಜಿಲ್ಲೆಯ ಕೇಳಿಕೆಗಳ ವೈಶಿಷ್ಟ್ಯತೆ<br>**ನಟರಾಜ ಬಿ.ಎನ್.** | **118-130** |

ISSN : 3048-7137

# ಬಯಲಾಟ ಕಲಾವಿದ ಜಡೆ ದೊಡ್ಡಬಸಪ್ಪ

**ಗಾದೆಪ್ಪ**

**ಸೂಚಕ ಪದಗಳು**

ಬಯಲಾಟ, ಪೌರಾಣಿಕ ಕಥಾನಕ, ಕನ್ನಡ ಜನಪದ ರಂಗಭೂಮಿ, ಪರಂಪರೆ, ಬಯಲಾಟ ಕಲಾವಿದರು

**ಸಾರಲೇಖ** : ಜಡೆ ದೊಡ್ಡಬಸಪ್ಪ 1959ರಲ್ಲಿ ನಂ.10 ಮುದ್ದಾಪುರದಲ್ಲಿ ಜನಿಸಿದ್ದು, ಬಾಲ್ಯದಿಂದಲೇ ಕಲಾಸಕ್ತಿಯುಳ್ಳ ಪ್ರತಿಭಾವಂತರು. ಪ್ರಾಥಮಿಕ ಶಿಕ್ಷಣ ಮುದ್ದಾಪುರ, ಪ್ರೌಢ ರಾಮಸಾಗರ ಮತ್ತು ಪದವಿಪೂರ್ವ ಕಂಪ್ಲಿ ಕಾಲೇಜಿನಲ್ಲಿ ಪಡೆದವರು. 1972ರಲ್ಲಿ ಶಾಲಾ 'ಕಚಗುಳ' ನಾಟಕದಲ್ಲಿ ಅಭಿನಯದಿಂದ ರಂಗಭೂಮಿಗೆ ಪ್ರವೇಶಿಸಿದರು. ಕುಟುಂಬದ ಆರ್ಥಿಕ ಪರಿಸ್ಥಿತಿಯಿಂದ ಉನ್ನತ ಶಿಕ್ಷಣ ಸಾಧ್ಯವಾಗಲಿಲ್ಲ, ಆದರೆ ಬಯಲಾಟದಲ್ಲಿ ಶ್ರೇಷ್ಠ ಸೇವೆ ಸಲ್ಲಿಸಿ 'ಮುದ್ದಾಪುರದ ಮನ್ಮಥ', 'ಹಸಿರು ನಿಶಾನೆ' ಎಂಬ ಖ್ಯಾತಿ ಗಳಿಸಿದರು. ಶ್ರೀದೇವಮಾಂಬ ಕರ್ನಾಟಕ ಮಂಡಳಿಯ ಮತ್ತು ಅಖಿಲ ಕರ್ನಾಟಕ ಬಯಲಾಟ ಪರಿಷತ್ತಿನ ಮೂಲಕ ಮುತ್ತೂರು, ಬಳ್ಳಾರಿ, ಉತ್ತರ ಭಾರತದ ಗ್ರಾಮಗಳಲ್ಲಿ ಪ್ರದರ್ಶನ ನೀಡಿ ಜನಪ್ರಿಯತೆಯನ್ನು ಗಳಿಸಿದರು. ಹಿರಿಯ ಕಲಾವಿದರ ಮಾರ್ಗದರ್ಶನ, ಸಂಗೀತ, ನೃತ್ಯ, ವೇಷಭೂಷಣ, ಪಾತ್ರ ಹಾವ-ಭಾವ, ಮುಮ್ಮೇಳ-ಹಿಮ್ಮೇಳದಲ್ಲಿ ವಿಶೇಷ ಪರಿಣತಿ ಹೊಂದಿರುವ ಜಡೆ ದೊಡ್ಡಬಸಪ್ಪನವರು ಕನ್ನಡ ಜನಪದ ರಂಗಭೂಮಿಯ ಪರಂಪರೆಯನ್ನು ಉಳಿಸಿ ಬೆಳೆಸಿದ್ದಾರೆ. ಅವರ ವೈಯಕ್ತಿಕ ಜೀವನದಲ್ಲಿ ಧರ್ಮಪತ್ನಿ ಸರಸ್ವತಮ್ಮ ಮತ್ತು ನಾಲ್ಕು ಪುತ್ರಿಯರು ಇದ್ದಾರೆ. ಮುದ್ದಾಪುರದಲ್ಲಿ ಸರಕಾರದ ಮಾಸಾಶನದಿಂದ ಜೀವನ

ನಿರ್ವಹಿಸುತ್ತಿರುವ ಅವರು, ನಾಡಿನ ಜನರ ಮನರಂಜನೆ, ಶ್ರೇಷ್ಠ ಕಲಾಪ್ರದರ್ಶನ, ಬಯಲಾಟದ ಚರಿತ್ರೆ ಹಾಗೂ ಸಂಸ್ಕೃತಿಯನ್ನು ಮುಂದಿನ ಪೀಳಗೆಗೆ ತರುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ.

ಮುದ್ದಾಪುರದ ಮನ್ಮಥ ಎಂದೇ ಪ್ರೇಕ್ಷಕರು ಗುರುತಿಸುವ ಜಡೆ ದೊಡ್ಡ ಬಸಪ್ಪ ನವರು ಅಂಜಿನಪ್ಪ ಮತ್ತು ದೇವಮ್ಮ ದಂಪತಿಗಳ ಮಗನಾಗಿ ಮೊದಲನೇ ಜೂನ್ 1959ರಲ್ಲಿ ನಂ.10 ಮುದ್ದಾಪುರದಲ್ಲಿ ಜನಿಸಿದರು. ಪ್ರಾಥಮಿಕ ಶಿಕ್ಷಣವನ್ನು ಮುದ್ದಾಪುರದಲ್ಲಿ, ಪ್ರೌಢ ಶಿಕ್ಷಣವನ್ನು ರಾಮಸಾಗರದಲ್ಲಿ ಪೂರೈಸಿದರು. ನಂತರ ಪದವಿಪೂರ್ವ ಶಿಕ್ಷಣವನ್ನು ಸರಕಾರಿ ಕಾಲೇಜು ಕಂಪ್ಲಿಯಲ್ಲಿ ಪಡೆದರು. ವಿದ್ಯಾರ್ಥಿ ದೆಸೆಯಿಂದಲೇ ಅಂದರೆ ರಾಮಸಾಗರ ಶಾಲೆಯಲ್ಲಿ ಓದುವ ಸಂದರ್ಭ ದಲ್ಲಿಯೇ ಇವರಿಗೆ ಇರುವ ಕಲಾಸಕ್ತಿ ಗುರುತಿಸಿದ ಶಿಕ್ಷಕರು 1972ರಲ್ಲಿಯೇ ಶಾಲೆಯಲ್ಲಿ ಆಯೋಜಿಸಿದ 'ಕಚಗುಳಿ' ನಾಟಕದಲ್ಲಿ ಅಭಿನಯಿಸಲು ಅವಕಾಶವನ್ನು ಕಲ್ಪಿಸಿದರು. ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದ ಜಡೆ ದೊಡ್ಡಬಸಪ್ಪ ಅವರು ತಮಗೆ ನೀಡಿದ ಪಾತ್ರಕ್ಕೆ ನ್ಯಾಯ ಒದಗಿಸಿ ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ಮಕ್ಕಳ ನಾಟಕದ ನಟನಾಗಿ ರಂಗಭೂಮಿ ಪ್ರವೇಶಿಸಿದ ಜಡೆ ದೊಡ್ಡಬಸಪ್ಪ ಅವರಿಗೆ ಉನ್ನತ ಶಿಕ್ಷಣ ಪಡೆಯಲು ಸಾಧ್ಯವಾಗಲಿಲ್ಲ. ತಂದೆ ತಾಯಿಗಳು ಕೃಷಿಕಾರ್ಮಿಕರು ಕುಟುಂಬ ನಡೆಸುವುದೇ ಕಷ್ಟವಾಗಿದ್ದರಿಂದ ಮಗನ ಉನ್ನತ ಶಿಕ್ಷಣದ ಕನಸು ಕನಸಾಗಿಯೇ ಉಳಿಯಿತು. ಜಡೆ ದೊಡ್ಡಬಸಪ್ಪ ಧರ್ಮಪತ್ನಿ ಸರಸ್ವತಮ್ಮ ಈ ದಂಪತಿಗಳಿಗೆ ನಾಲ್ಕು ಜನ ಹೆಣ್ಣುಮಕ್ಕಳು. ವಿವಾಹವಾಗಿ ಎಲ್ಲರೂ ಗಂಡನ ಮನೆಯಲ್ಲಿದ್ದಾರೆ.

ಪದವಿ ಪೂರ್ವ ಶಿಕ್ಷಣ ಪೂರೈಸಿದ ಜಡೆ ದೊಡ್ಡ ಬಸಪ್ಪ ಅವರು ತಮ್ಮ ತಂದೆಗೆ ಕೃಷಿ ಚಟುವಟಿಕೆಗೆ ಸಹಾಯಕರಾಗಿ ಕಾಯಕ ಆರಂಭಿಸಿದರು. ವಿದ್ಯಾವಂತ ಯುವಕರಾದ ಇವರ ಚತುರತೆಯನ್ನು ಗಮನಿಸಿದ ಗ್ರಾಮಲೆಕ್ಕಾಧಿಕಾರಿಗಳು ಸಹಾಯಕ್ಕಾಗಿ ತೆಗೆದುಕೊಂಡರು. ಕೃಷಿ ಚಟುವಟಿಕೆ ಇಲ್ಲದ ಸಮಯದಲ್ಲಿ ಮಾಡಿದ ಈ ಕೆಲಸದಿಂದ ಬಂದ ಪುಡಿಗಾಸು ಕುಟುಂಬದ ನಿರ್ವಹಣೆಗೆ ಸಹಾಯಕವಾಗುತ್ತಿತ್ತು ಎನ್ನುವುದನ್ನು ಮರೆಯುವಂತಿಲ್ಲ. ಅದರೆ ಅವರು ಸರ್ಕಾರದಿಂದ ಆಯ್ಕೆಯಾದವರಲ್ಲ ಹೀಗಾಗಿ ಗ್ರಾಮಲೆಕ್ಕಾಧಿಕಾರಿಗಳು ಬದಲಾವಣೆ ಹೊಂದಿದಾಗಲೇ ಜಡೆ ದೊಡ್ಡಬಸಪ್ಪನವರು ಆ ಕೆಲಸವನ್ನು ಕಳೆದುಕೊಳ್ಳುವುದು, ಕೆಲವು ಸಲ ಮತ್ತೆ ಸೇರಿಕೊಳ್ಳುವುದು. ಹೀಗೆ ಹಾವು ಏಣಿ

ISSN : 3048-7137

ಆಟದಂತಿದೆ ಇವರ ಅರೆಕಾಲಿಕ ಉದ್ಯೋಗ. ಪ್ರಸ್ತುತ ಸಂದರ್ಭದಲ್ಲಿ ಮುದ್ದಾಪುರದಲ್ಲಿನ ಸಣ್ಣ ಮನೆಯಲ್ಲಿ ದಂಪತಿಗಳು ನೆಲೆಸಿದ್ದಾರೆ. ಸರಕಾರವು ಕಲಾವಿದರಿಗೆ ನೀಡುವ ಮಾಸಾಶನ ಹಣದಿಂದ ಜೀವನ ಸಾಗಿಸುತ್ತಾರೆ. ಜಡೆ ದೊಡ್ಡಬಸಪ್ಪ ಈಗಲೂ ಬಯಲಾಟದಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಅವರ ಯಶಸ್ಸಿನ ಹಿಂದೆ ಸರಸ್ವತಮ್ಮನವರ ಪ್ರೋತ್ಸಾಹವಿದೆ ಎಂಬುದನ್ನು ಮರೆಯುವಂತಿಲ್ಲ.

## ಬಯಲಾಟದ ಹಿನ್ನೆಲೆ

ಉತ್ತರ ಕರ್ನಾಟಕದ ಆಟವೆಂದು ಕರೆಯಲ್ಪಡುವ ಬಯಲಾಟವನ್ನು ಮೂಡಲಪಾಯದ ಆಟ, ದೊಡ್ಡಾಟ ಎಂದು ಕರೆಯುತ್ತಾರೆ. ಈ ಆಟಕ್ಕೆ ಸುಮಾರ 150 ವರ್ಷಗಳ ಐತಿಹಾಸಿಕ ಪರಂಪರೆಯಿದೆ. ಈಗ ಲಭ್ಯವಾಗಿರುವ ಆಕರಗಳ ಹಿನ್ನೆಲೆಯಲ್ಲಿ ಕಂಪ್ಲಿ ಪರಿಸರದಲ್ಲಿ ದೊರೆತ "ಕುಮಾರರಾಮ" ಎನ್ನುವ ದೊಡ್ಡಾಟದ ಕೃತಿಯು ಪ್ರಾಚೀನವಾದದ್ದು ಎಂಬುದು ವಿದ್ವಾಂಸರು, ಸಂಶೋಧಕರು ಗುರುತಿಸಿದ್ದಾರೆ. ಕುಮಾರರಾಮನು ಕಂಪ್ಲಿ ಸಂಸ್ಥಾನ ದೊರೆಯಾಗಿದ್ದ. ಈ ಭೂಪ್ರದೇಶವನ್ನು ಅನೇಕ ರಾಜ ಮಹಾರಾಜರ ಆಡಳಿತಕ್ಕೆ ಒಳಪಟ್ಟಿದೆ. ಆದರೆ ಕುಮಾರರಾಮನ ಚರಿತ್ರೆಯನ್ನು ಆಧರಿಸಿ ರಚನೆಯಾದಂತೆ ಬೇರೆ ಯಾವುದೇ ರಾಜರನ್ನು ಕುರಿತು ಜಾನಪದ ಸಾಹಿತ್ಯ ರೂಪಗೊಂಡಿಲ್ಲ. ಹೀಗಾಗಿ "ಕುಮಾರರಾಮ" ಎನ್ನುವುದು ದೊಡ್ಡಾಟದ ಮೊದಲ ಕೃತಿಯಾದರೆ... ದೊಡ್ಡಾಟದ ಉಗಮವು ಕೂಡ ಕಂಪ್ಲಿ ಪರಸರವೇ ಆಗಿರಬಹುದು. 19ನೇ ಶತಮಾನದ ಉತ್ತರಾರ್ಧದಲ್ಲಿಯೇ ಬಳ್ಳಾರಿ ಪರಿಸರದಲ್ಲಿ ಬಯಲಾಟದ ಪ್ರಯೋಗಗಳು ಜನಪ್ರಿಯವಾಗಿದ್ದವು. ಅಲ್ಲದೇ 1900ರ ವೇಳೆಗಾಗಲೇ ಬಳ್ಳಾರಿಯಲ್ಲಿ ಕೆಲವು ಬಯಲಾಟ ಅಥವಾ ದೊಡ್ಡಾಟದ ಕೃತಿಗಳು ಮುದ್ರಣಗೊಂಡು ಜನಮನ್ನಣೆಗಳಿಸಿದ್ದವು ಎಂಬುದನ್ನು ಗಮನಿಸಬಹುದು. ದೊಡ್ಡಾಟ, ಅಥವಾ ಬಯಲಾಟಕ್ಕೆ ಬಳ್ಳಾರಿಯ ಆಟವೆಂದು ಕರೆಯಲಾಗುತ್ತದೆ. ಬಳ್ಳಾರಿ ಜಿಲ್ಲೆಯಲ್ಲಿ ಅನೇಕ ಹಿರಿಯ ಮತ್ತು ಕಿರಿಯ ಪುರುಷ ಮತ್ತು ಮಹಿಳಾ ಕಲಾವಿದರ ತವರು ಎಂದು ಕರೆಯುತ್ತಾರೆ. ಇನ್ನೂ ಮೇಳದವರನ್ನು ಕುರಿತು ಹೇಳುವುದಾರೆ ಮುದ್ದಾಪುರದ ಮುಮ್ಮೇಳ ಕಲಾವಿದರು ಶಾಸ್ತ್ರೀಯ ಹಾಡುಗಾರಿಕೆಯನ್ನು ಉಳಿಸಿ ಬೆಳೆಸಿದವರು. ಇಂದಿಗೂ ಆ ಊರಿನಲ್ಲಿ ನಡೆಯುವ ಬಯಲಾಟ ಪ್ರದರ್ಶನಗಳನ್ನು ಮೊದಲಿನ ಸ್ವರೂಪದಲ್ಲಿ ಉಳಿಸಿ ಬೆಳೆಸಿಕೊಂಡು ಮುಂದೆ ಸಾಗಲು ಬೇಕಾದ ಮಾರ್ಗವನ್ನು ಕಂಡುಕೊಂಡಿದ್ದಾರೆ.

ಬಳ್ಳಾರಿ ಜಿಲ್ಲೆಯ ಕಂಪ್ಲಿ ತಾಲ್ಲೂಕಿನ ದಕ್ಷಿಣ ದಿಕ್ಕಿಗೆ ಎರಡು ಕಿ.ಮೀ. ದೂರದಲ್ಲಿರುವ ಮುದ್ದಾದ ಊರು ಮುದ್ದಾಪುರ. ಈ ಗ್ರಾಮಕ್ಕೆ ನಂ.10 ಮುದ್ದಾಪುರವೆಂದು ಕರೆಯುತ್ತಾರೆ. ಗ್ರಾಮಪಂಚಾಯಿತಿ ಆಡಳಿತಕ್ಕೆ ಒಳಪಟ್ಟ ಈ ಗ್ರಾಮದ ಜನಸಂಖ್ಯೆ ಸುಮಾರು ಐದು ಸಾವಿರದ ಐನೂರು ಇರಬಹುದು. ಆದರೆ ಈ ಗ್ರಾಮದಲ್ಲಿ ಜಾನಪದ ಕ್ಷೇತ್ರಕ್ಕೆ ಸೇವೆ ಸಲ್ಲಿಸಿ, ಬದುಕಿ ಬಾಳಿದ ಕಲಾವಿದರು ಅನೇಕರು. ಹಿರಿಯರ ಸ್ಫೂರ್ತಿಯಿಂದ ಇಂದಿಗೂ ಸಂಗೀತ, ಸಾಹಿತ್ಯ, ರಂಗಭೂಮಿ ನೃತ್ಯ ಮುಂತಾದ ಸರಸ್ವತಿ ಆರಾಧಕರು ವಿವಿಧ ಸೇವೆ ಸಲ್ಲಿಸುವ ಮೂಲಕ ಪರಂಪರೆ ಮತ್ತು ಸಂಸ್ಕೃತಿಯ ಪೋಷಕರಾಗಿ ದುಡಿಯುತ್ತಿದ್ದಾರೆ. ಹೀಗೆ ಕಲಾಪೋಷಕರಲ್ಲಿ ಒಬ್ಬರಾದ ಜಡೆ ದೊಡ್ಡಬಸಪ್ಪನವರು ಹಿರಿ–ಕಿರಿಯರ ಮೆಚ್ಚುಗೆಯ ನಟರು, ನಿರ್ದೇಶಕರು, ಬರಹಗಾರರು, ಹಿನ್ನೆಲೆಗಾಯಕರು (ಮುಮ್ಮೇಳ ಮತ್ತು ಹಿಮ್ಮೇಳ) ಪುರಾಣ ಪಠಣಕಾರರು ಹೌದು. ತಮ್ಮ ಕಲಾ ಸೇವೆಯ ಮೂಲಕ ಕರ್ನಾಟಕ ಮಾತ್ರವಲ್ಲದೇ ಅನೇಕ ರಾಜ್ಯದ ಕಲಾಸಕ್ತರಿಗೂ, ಸಹೃದಯರಿಗೂ ಮಾತ್ರವಲ್ಲದೆ ದೇವಿ ಆರಾಧಕರ ಮೆಚ್ಚುಗೆಗೆ ಪಾತ್ರರಾದವರು. ಅವರ ಅನುಭವದ ಮೂಲಕ ಬಯಲಾಟದ ಚಾರಿತ್ರಿಕ ಹಿನ್ನೆಲೆಯನ್ನು ಅವಲೋಕಿಸಬಹುದು.

## ಬಯಲಾಟಕ್ಕೆ ಪ್ರವೇಶ

ಜಡೆ ದೊಡ್ಡಬಸಪ್ಪ 1979ರಲ್ಲಿ ತಮ್ಮ ಗ್ರಾಮದಲ್ಲಿ ಹಿರಿಯರು ಆಯೋಜಿಸಿದ ಗಿರಿಜಾಕಲ್ಯಾಣದಲ್ಲಿ ಗುಂಡ್ಲವದ್ದಿಗೇರಿ ತಿಮ್ಮಾರೆಡ್ಡಿ ಅವರ ಮಾರ್ಗದರ್ಶನದಲ್ಲಿ ಹಿಮಂತರಾಜನ ಪಾತ್ರದಲ್ಲಿ ಅಭಿನಯಿಸಿದರು. ನಂತರ ಮುದ್ದಾಪುರದ ಜೀರ್ ಶಿವಲಿಂಗಪ್ಪ ಮೇಷ್ಟ್ರು, ವಿಟ್ಲಾಪುರದ ವೀರಣ್ಣ, ತಾವರಗೇರಿ ಯಲ್ಲಪ್ಪ, ಬಳ್ಳಾರಿ ಕಲ್ಲಪ್ಪ ಹಾಗೂ ಅವರ ಚಿಕ್ಕಪ್ಪ ಜಡೆ ಬಸಪ್ಪ ಮುಂತಾದವರ ಗರಡಿಯಲ್ಲಿ ಪಳಗಿದವರು. ಮುಂದೆ ದಾಸರ ಈರಣ್ಣ ಮೇಷ್ಟ್ರು ಗೆಳೆತನದೊಂದಿಗೆ ಬೇರೆ ಬೇರೆ ಊರುಗಳಲ್ಲಿ ಬಯಲಾಟ ಕಲಿಸಲು ಹೋಗಿ ಇನ್ನಷ್ಟು ಗಟ್ಟಿಯಾದರು. ಅವರ ಕಂಠಸಿರಿಯಿಂದ ಹೊರಹೊಮ್ಮಿದ ಹಾಡುಗಳು, ಮಾತಿಗೆ ತಕ್ಕ ಹಾವ–ಭಾವ, ಸಂಗೀತ ತಕ್ಕ ನೃತ್ಯ, ಲಯ–ತಾಳಕ್ಕೆ ಅನುಗುಣವಾದ ಅವರ ಅಭಿನಯವು ಜನರ ಮನತಣಿಸಿದವು. ಹೀಗೆ ಹಿರಿಯ ಕಲಾವಿದರ ಪ್ರೋತ್ಸಾಹವು ಜನಪದ ರಂಗಭೂಮಿ ಕಲಾವಿದರಾಗಿ ರೂಪುಗೊಳ್ಳಲು ಮಾರ್ಗದರ್ಶನವಾಯಿತು. ತಮ್ಮೂರಿಗೆ ಮಾತ್ರ ಸೀಮಿತರಾಗದೇ ಸುತ್ತಮುತ್ತಲಿನ ಗ್ರಾಮಗಳಲ್ಲಿ ನಡೆಯುವ ನಾಟಕಗಳಲ್ಲಿ ಮುಖ್ಯವಾಗಿ ಮುಮ್ಮೇಳ ಹಾಡುಗಾರನಾಗಿ ಜನಪ್ರಿಯತೆಗಳಿಸಿದರು.

ಹೀಗೆ ಕೆಲವು ಸಲ ನಟ–ನಟಿ ಪಾತ್ರಗಳಲ್ಲಿ ಅಭಿನಯಿಸಿ ಬಯಲಾಟಗಳಿಗೆ ಅನನ್ಯತೆಯನ್ನು ಸ್ಥಾಪಿಸಿದರು. ಬಯಲಾಟದಲ್ಲಿ ನವನವೀನ ಪ್ರಯೋಗಳನ್ನು ಮಾಡುವ ಮೂಲಕ ಮುಂದಿನ ಕಲಾವಿದರಿಗೂ ಮಾರ್ಗದರ್ಶಕರಾದರು. 'ದ್ರೌಪದಿ ವಸ್ತ್ರಾಪಹರಣ ಅರ್ಥಾತ್ ದುಶ್ಯಾಸನನ ವಧೆ', 'ಪಾರ್ಥವಿಜಯ ಅರ್ಥಾತ್ ಕಾಲಕೇಯ ನಿವಾತಕರ ವಧಾ', 'ಪಾಂಡು ವಿಜಯ ಅರ್ಥಾತ್ ಕೀಚಕನ ವಧೆ', 'ಚಿತ್ರಸೇನ ಕಾಳಗ ಅರ್ಥಾತ್ ದುರ್ಯೋಧನನ ಗರ್ವಭಂಗ', 'ಆದ್ರಿ ಅರಸನ ತರುಣಿಯ ಪಾಣಿಗ್ರಹಣ ಅರ್ಥಾತ್ ವಜ್ರಾಂಗದನ ತೃತೀಯ ಪುತ್ರನ ವಧೆ', 'ಧರ್ಮಾಶ್ವಮೇಧಯಾಗ ಅರ್ಥಾತ್ ಭಕ್ತಸುಧನ್ವ', 'ರಾಮಾಯಣ ಅರ್ಥಾತ್ ರಾವಣನ ವಧೆ', 'ವೀರ ಅಭಿಮನ್ಯು ಕಾಳಗ ಅರ್ಥಾತ್ ಜಯದ್ರಥನ ವಧೆ', 'ಶಿವಭಕ್ತಮಾರ್ಕಂಡೇಯನ ಚರಿತ್ರೆ', 'ರತಿಕಲ್ಯಾಣ ಅರ್ಥಾತ್ ಕೌಂಡ್ಲಿಕನ ವಧೆ', ಪಾರ್ಥವಿಜಯ ಅರ್ಥಾತ್ ಜಠಾಸುರನ ವಧೆ', 'ಪಾರ್ವತಿ ಕಲ್ಯಾಣ ಅರ್ಥಾತ್ ಮನ್ಮಥನ ದಹನ', ಶ್ರೀದೇವಿ ಮಹಾತ್ಮೆ ಅರ್ಥಾತ್ ಶುಂಭ ನಿಶುಂಭರ ವಧೆ' ಮುಂತಾದ ನಾಟಕಗಳ ಪ್ರಯೋಗಗಳಲ್ಲಿ ತುಸುಹೆಚ್ಚು ಎನ್ನುವುವಂತೆ ಸೇವೆ ಸಲ್ಲಿಸಿದ್ದಾರೆ. ಹೀಗೆ ಸಂಗೀತ ಸರಸ್ವತಿಯ ಉಪಾಸಕರಾಗಿ, ಕಲಾದೇವಿಯ ಆರಾಧಕರಾಗಿ ನಾಡಿನೆಲ್ಲಡೆ ಚಿರಪರಿಚಿತರಾದವರು.

## ಸ್ಥಳೀಯತೆಯನ್ನು ಮೀರಿದ ಪ್ರದರ್ಶನಗಳು

2007ರಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯವು ಆಯೋಜಿಸಿದ ದಕ್ಷಿಣ ಭಾರತ ಜನಪದ ರಂಗಭೂಮಿ ಎನ್ನುವ ವಿಷಯ ಕುರಿತ ರಾಷ್ಟ್ರೀಯ ವಿಚಾರ ಸಂಕಿರಣ ಮತ್ತು ಕಲಾ ಪ್ರದರ್ಶನ ಏರ್ಪಡಿಲಾಗಿತ್ತು. ನ.10 ಮುದ್ದಾಪುರ ಶ್ರೀ ದೇವಮಾಂಬ ಕರ್ನಾಟಕ ಮಂಡಳಿಯ ಕಲಾವಿದರು ಸಾಲಿ ವೆಂಕೋಬಣ್ಣ ಸಂಕಲಿತ "ಗಿರಿಜಾ ಕಲ್ಯಾಣ" ಬಯಲಾಟವನ್ನು ಪ್ರದರ್ಶನ ಮಾಡಿದರು. ಕಲಾಪ್ರೇಮಿಗಳು ಮಾತ್ರವಲ್ಲದೆ ಹಿರಿಯ ವಿದ್ವಾಂಸರ ಮೆಚ್ಚುಗೆಯನ್ನು ಗಳಿಸಿದರು. ಈ ನಾಟಕದಲ್ಲಿ ಜಡೆ ದೊಡ್ಡಬಸಪ್ಪನವರು ಮನ್ಮಥನ ಪಾತ್ರದಲ್ಲಿ ಅಭಿನಯಿಸಿದರು. ನಾಟಕ ಜನಪ್ರಿಯತೆ ಪಡೆಯಲು ಈ ಹಿಂದೆಯೇ ಅನೇಕ ಪ್ರಯೋಗದ ಅನುಭವವು ಕಾರಣವೆಂದು ಬೇರೆ ಹೇಳಬೇಕಾದ ಅಗತ್ಯವಿಲ್ಲ. ಅಖಿಲ ಕರ್ನಾಟಕ ಬಯಲಾಟ ಪರಿಷತ್ತಿನ ಮೂಲಕ ಮುದ್ದಾಪುರದ ಕಲಾವಿದರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಏರ್ಪಡಿಸುವ ಇಲ್ಲವೇ ಅವರಿಂದ ಸಹಾಯಧನ ಪಡೆದು ಬೇರ ಬೇರೆ ಸ್ಥಳದಲ್ಲಿ ಪ್ರದರ್ಶನಗಳನ್ನು ನೀಡಿದ್ದಾರೆ. ಅವರು ಅಭಿನಯಿಸಿದ ಬಯಲಾಟದ ಯಶಸ್ಸಿನಿಂದ ತಮ್ಮೂರಿನ ಕೀರ್ತಿಪತಾಕೆಯನ್ನು ನಾಡಿನೆಲ್ಲಡೆ

ಹಾರಿಸಿದ್ದಾರೆ. ಈ ತಂಡದವರ ಅಭಿನಯವನ್ನು ಮೆಚ್ಚಿದ ಬೇರೆ ಬೇರೆ ರಾಜ್ಯದಲ್ಲಿನ ಕನ್ನಡ ಸಂಘಟನೆಯವರ ಆಹ್ವಾನವನ್ನು ಮನ್ನಿಸಿ ಪ್ರದರ್ಶನಗಳನ್ನು ಮಾಡಿದ್ದಾರೆ. ಆ ಮೂಲಕ ಮುದ್ದಾಪುರ ಕಲಾವಿದರು ಉತ್ತರ ಭಾರತದ ರಾಜ್ಯದಲ್ಲಿಯೂ ಬಯಲಾಟದ ಛಾಪನ್ನು ಮೂಡಿಸಿ, ಕನ್ನಡ ಜನಪದ ರಂಗಭೂಮಿ ಅನನ್ಯತೆಯನ್ನು, ಕನ್ನಡ ಕಂಪನ್ನು ಪಸರಿಸಿದ್ದಾರೆ. ಶ್ರೀ ದೇವಮಾಂಬ ಕರ್ನಾಟಕ ಮಂಡಳಿಯ ಕಲಾವಿದರಲ್ಲಿ ಹಿರಿಯರಾದ ಜಡೆ ದೊಡ್ಡ ಬಸಪ್ಪನವರ ಅನುಭವಗಳನ್ನು ಗಮನಿಸಬಹುದು.

ಈ ಮೊದಲೇ ಹೇಳಿರುವಂತೆ ಅತ್ಯುತ್ತಮ ಕಲಾಪದರ್ಶನಕ್ಕೆ ಹೆಸರುವಾಸಿಯಾದ ಮುದ್ದಾಪುರ ಕಲಾವಿದರು ಕೆಲವು ಸಮಸ್ಯೆಗಳನ್ನು ಎದುರಿಸಿದ ಪ್ರಸಂಗಗಳಿವೆ. ತಮ್ಮೂರಿನಲ್ಲಿ ಇಲ್ಲವೇ ಪಕ್ಕದ ಊರಿನಲ್ಲಿ ಪ್ರದರ್ಶನ ನೀಡುವ ಸಂದರ್ಭದಲ್ಲಿ ತಮಗೆಬೇಕಾದ ಸಾಮಗ್ರಿಗಳನ್ನು ಹೊಂದಿಸಿಕೊಳ್ಳುವುದು ಸುಲಭವಾಗುತ್ತದೆ. ಹಾಗೆಯೇ ನಮ್ಮ ರಾಜ್ಯದಲ್ಲಿ ಬೇರೆ ಬೇರೆ ಜಿಲ್ಲೆಯಲ್ಲಿ ಪ್ರದರ್ಶನ ನೀಡಲು ಕಲಾವಿದರು ಸಾಮಗ್ರಿಯನ್ನು ಸಾಗಿಸಲು ಬಾಡಿಗೆ ವಾಹನವನ್ನು ಬಳಸುತ್ತಾರೆ. ಆದರೆ ಹೊರ ರಾಜ್ಯಕ್ಕೆ ಪ್ರಯಾಣ ಮಾಡುವ ಸಂದರ್ಭ ಹೀಗಿರುವುದಿಲ್ಲ. ರೈಲುಗಳಲ್ಲಿ ಪ್ರಯಾಣ ಮಾಡಬೇಕಾದ ಅನಿವಾರ್ಯತೆ ಇರುತ್ತದೆ. ರೈಲು ಕೆಲವು ನಿಲ್ದಾಣದಲ್ಲಿ ಕಡಿಮೆ ಸಮಯ ನಿಲ್ಲುತ್ತವೆ. ಗುಜರತ್ ರಾಜ್ಯಕ್ಕೆ ರೈಲು ಪ್ರಯಾಣ ಮಾಡುವ ಸಂದರ್ಭದಲ್ಲಿ ಕಲಾವಿದರು ತಾವು ಅಭಿನಯಿಸುವ ಪಾತ್ರಕ್ಕೆ ಬೇಕಾಗುವ (ಒಂದು ತಲೆಕಿರೀಟ, ಎರಡು ಎರಡು ಭುಜಕಿರೀಟ, ಬಿಲ್ಲು–ಬಾಣ, ಉಡುಪು ಮುಂತಾದವು) ಸಾಮಗ್ರಿಗಳು ಹಾಗೂ ತಮಗೆ ಬೇಕಾದ ಸಾಮಗ್ರಿಗಳನ್ನು ತೆಗೆದುಕೊಂಡು ರೈಲು ಹತ್ತಿದ್ರು. ಆದರೆ ರೈಲು ಎರಡು ನಿಮಿಷದ ನಿಲುಗಡೆ ಇರುವ ಊರಿನಲ್ಲಿ ಇಳಿಯುವ ಸಂದರ್ಭದಲ್ಲಿ ಅನುಭವಿಸಿದ ಕಷ್ಟವನ್ನು ನೆನೆದರೆ ಈಗಲೂ ತಲ್ಲಣಗೊಳ್ಳುತ್ತಾರೆ.

ಹವ್ಯಾಸಿ ಕಲಾವಿದರು ತಾವು ಅಭಿನಯಿಸಲು ತೊಡಗುವ ನಾಟಕಕ್ಕೆ ಬೇಕಾಗುವ ಹಣವನ್ನು ಪಾತ್ರಧಾರಿಗಳು ಹೊಂದಿಸಿಕೊಡಬೇಕು. ತಮ್ಮೂರಿನಲ್ಲಿ ಏರ್ಪಡಿಸಿದ ನಾಟಕವು ಮಳೆಯಿಂದಾಗಿ ನಿಲ್ಲಿಸುವ ಪ್ರಸಂಗ ಬಂದಿತ್ತು. ಹೀಗಾಗಿ ಕಲಾಭಿಮಾನಿಗಳು ರಸಭಂಗವನ್ನು ಅನುಭವಿಸುವಂತಾಯಿತು. ಬಾಡಿಗೆ ಪಡೆದ ಸಾಮಗ್ರಿಗಳಿಗೆ ಹಾಗೂ ವೃತ್ತಿಕಲಾವಿದರಿಗೆ ಕನಿಷ್ಟ ಅರ್ಧ ಬಾಡಿಗೆ ಮತ್ತು ಸಂಭಾವನೆಯನ್ನು ನೀಡಬೇಕಾಗುತ್ತದೆ. ಇನ್ನೂ ಕೆಲವು ಸಲ ಪಾತ್ರಧಾರಿಗಳಿಗೆ

ISSN : 3048-7137

ಅನಾರೋಗ್ಯ ಇಲ್ಲವೇ ಊರಿನಲ್ಲಿ ಅನಿರೀಕ್ಷಿತ ವ್ಯಾಜ್ಯಗಳು ತಲೆದೋರಿದಾಗ ಒಂದು ಅಥವಾ ಎರಡು ಪಾತ್ರಗಳನ್ನು ಬೇರೆ ಊರುಗಳಿಂದ ಕರೆಸಿಕೊಂಡು ನಾಟಕ ಮಾಡಿರುವುದುಂಟು. ಇಂತಹ ಪ್ರಸಂಗಗಳು ಕೂಡ ಬಯಲಾಟದ ಪ್ರದರ್ಶನಕ್ಕೆ ಅಡೆತಡೆಯನ್ನುಂಟು ಮಾಡುತ್ತವೆ, ಹಣಕಾಸಿನ ಸಮಸ್ಯೆಗಳಿಂದ ಮುಂದಿನ ಪ್ರದರ್ಶನಗಳ ಹಿನ್ನಡೆಗೆ ಕಾರಣವಾಗುತ್ತವೆ ಎನ್ನುವುದು ಅವರ ಅಭಿಪ್ರಾಯವಾಗಿದೆ.

## ಬಯಲಾಟದ ಕಥಾವಸ್ತು

ಬಯಲಾಟಕ್ಕೆ ಬಳಸುವ ಕಥಾಪ್ರಸಂಗಳು ರಾಮಾಯಣ ಮತ್ತು ಮಹಾಭಾರತ ಪ್ರಸಂಗಗಳು ಹೆಚ್ಚು. ಭಕ್ತಿನೆಲೆಯಲ್ಲಿನ ಸಾಧಕರನ್ನು ಮತ್ತು ದೇವಿಮಹಿಮೆಯನ್ನು ಸಾರುವ ಆಟಗಳಿವೆ. ಇವೆಲ್ಲವು ಪೌರಾಣಿಕ ಸಂಗತಿಗಳೇ ಆದರೆ ಈ ನಾಟಕಗಳನ್ನು ಯಾರು ಬರೆದರು, ಯಾರು ಸಂಗ್ರಹ ಬರಹಗಾರರು ಎಂದು ಗುರುತಿಸುವುದು ಕಷ್ಟ ಎನ್ನುವುದು ಅವರ ಅಭಿಪ್ರಾಯ. ಉದಾ: ಗಿರಿಜಾ ಕಲ್ಯಾಣ ನಾಟಕವನ್ನು ಸಾಲಿ ವೆಂಕೋಬಣ್ಣನವರು, ವೀರ ಅಭಿಮನ್ಯ ಕಾಳಗ ನಾಟಕವನ್ನು ಇಟಗಿ ಕೃಷ್ಣಶಾಸ್ತ್ರಿಗಳು ಬರೆದರು ಎನ್ನುವ ಅಭಿಪ್ರಾಯವಿದೆ. ನಾಟಕಕಾರನ್ನು ಗುರುತಿಸುವುದಕ್ಕೆ ಸ್ತ್ರೀ ಪಾತ್ರದ ಪದಗಳಲ್ಲಿ ಕೊನೆ ಚರಣದಲ್ಲಿ ಉಲ್ಲೇಖಿಸಲ್ಪಟ್ಟ ಅಂಕಿತನಾಮಗಳು ಸಹಾಯಕವಾಗುತ್ತವೆ ಎಂಬುದು ಅವರ ಬಲವಾದ ನಂಬಿಕೆ. ಶಿಷ್ಠ ಸಾಹಿತ್ಯದ ಕವಿಗಳಂತೆ ಬಯಲಾಟದ ಕೃತಿಕಾರರು ಸ್ವಯಂ ನಿರ್ವಚನಕ್ಕಿಂತ ದೈವೀನೆಲೆಯನ್ನು ಅವರು ಉಲ್ಲೇಖಿಸುತ್ತಾರೆ. ಹೀಗಾಗಿ ಮೂಲ ಲೇಖಕರನ್ನು ಗುರುತಿಸಲು ಇನ್ನಷ್ಟು ಸಂಶೋಧನೆ ನಡೆಯಬೇಕಿದೆ ಎನ್ನುತ್ತಾರೆ.

## ಬಯಲಾಟ ಆಟದ ಸಿದ್ಧತೆ ಮತ್ತು ಪ್ರಯೋಗ

ಸಾಹಿತ್ಯ ಸಂಗೀತ, ಹಾಡು ನೃತ್ಯ ಮತ್ತು ಸಂಭಾಷಣೆ ಮುಂತಾದ ಕಲೆಗಳನ್ನು ಮೈಗೂಡಿಸಿಕೊಂಡ ಕಲಾ ಸಂಗಮವೇ ಬಯಲಾಟ. ಪ್ರಾಚೀನ ಕಾಲದಿಂದಲೂ ಗ್ರಾಮೀಣರಿಗೆ ಮನರಂಜನೆ ಒದಗಿಸಿಕೊಂಡು ಬರುತ್ತಿರುವ ಹವ್ಯಾಸಿ ಕಲಾವಿದರು ಕೃಷಿಕರೇ. ಮಳೆಗಾಲಕ್ಕೆ ಮೊದಲೇ ನಾಟಕ ಪ್ರದರ್ಶಿಸುವ ಹಂಬಲ ಅವರದು. ಹೀಗಾಗಿ ಸುಗ್ಗಿಯ ಕೆಲಸ ಕಾರ್ಯಗಳು ಮುಗಿದ ಮೇಲೆ 'ಬಯಲಾಟ'ಗಳ ಆಯೋಜಿಸುವ ಪ್ರಕ್ರಿಯೆ ಆರಂಭವಾಗುತ್ತದೆ. ಆದರೂ ಕೆಲವು ಸಲ ಹಬ್ಬ, ಜಾತ್ರೆ

ಮತ್ತಿತರ ಹೆಚ್ಚಿನ ಸಂಖ್ಯೆಯಲ್ಲಿ ಸೇರುವ ಸಂದರ್ಭಗಳಲ್ಲಿ ಆಯೋಜಿಸಲಾಗುತ್ತದೆ. ಇದಕ್ಕೆ ಕಾರಣ ನೆಂಟರಿಷ್ಟರು, ಅಕ್ಕಪಕ್ಕದ ಊರಿನವರ ಎದುರಿಗೆ ತಮ್ಮ ಕಲೆ ಪ್ರದರ್ಶಿಸಬೇಕೆಂಬುದು ಕಲಾವಿದರ ಆಸೆಗನುಗುಣವಾಗಿ ಪ್ರದರ್ಶನಗಳನ್ನು ಆಯೋಜಿಸಿಕೊಳ್ಳುತ್ತಾರೆ. ನಂತರ ಬಯಲಾಟ ಕಲಿಸುವವರನ್ನು ಗುರುತಿ ಕೊಳ್ಳುತ್ತಾರೆ. ಇವರನ್ನು "ನಾಟಕ ಮಾಸ್ತರ, ಮೇಷ್ಟ್ರು, ಸಂಗೀತ ನಿರ್ದೇಶಕರು" ಎಂದು ಕರೆಯುತ್ತಾರೆ. ಇವರಿಗೆ ಕಲಾವಿದರೆಲ್ಲರೂ ಸೇರಿ ಇಂತಿಷ್ಟು ಹಣ ಅಥವಾ ಧಾನ್ಯಗಳನ್ನು ಸಂಭಾವನೆಯ ರೂಪದಲ್ಲಿ ಕೊಡುತ್ತಾರೆ. ಇವರು ಪಾತ್ರಮಾಡಲು ಆಸಕ್ತಿ ಇರುವವರ ವಯೋಗುಣ, ಮೈಕಟ್ಟು, ಕಂಠಗಳಿಗೆ ಅನುಗುಣವಾಗಿ ಪಾತ್ರ ಹಂಚುತ್ತಾರೆ. ಸ್ತ್ರೀ ಪಾತ್ರಗಳೂ ಬಹುಮುಖ್ಯ. ಈ ಪಾತ್ರಗಳನ್ನು ಗಂಡಸರೇ ಮಾಡುತ್ತಿದ್ದರು. ಏಳುಬೆಂಚಿ ಕೊಟ್ರಪ್ಪ, ಮುಷ್ಟಗಟ್ಟೆ ವೀರನಗೌಡ, ಕುರುಗೋಡು ವಾಮದೇವಪ್ಪನವರು 80ರ ದಶಕದಲ್ಲಿ ಸ್ತ್ರೀ ಪಾತ್ರದಲ್ಲಿ ಅಭಿನಯಿಸಿ ಬಹು ಪ್ರಸಿದ್ಧಿಯನ್ನು ಪಡೆದಿದ್ದರು. ಇವರ ಅಭಿನಯಕ್ಕೆ ಮೆಚ್ಚಿದ ಅನೇಕರು ಸಂಭಾವನೆ ನೀಡಿ ಕರೆಸಿಕೊಳ್ಳುತ್ತಿದ್ದರೆಂದು ಜಡೆ ದೊಡ್ಡಬಸಪ್ಪನವರ ಸ್ಮರಿಸುತ್ತಾರೆ.

## ಆಟಕ್ಕಾಗಿ ರಂಗಸಜ್ಜಿಕೆ ನಿರ್ಮಾಣ

ಅಟ್ಟಕಟ್ಟಿ ಆಡುವ ಕಲೆಯೇ ಬಯಲಾಟ. ಈ ದೊಡ್ಡಾಟಕ್ಕೆ ಮಂಟಪ ಕಟ್ಟುವುದೇ ಒಂದು ದೊಡ್ಡ ಕೆಲಸ. ಆಟಕ್ಕೆ ಇನ್ನು ಹತ್ತಿಪ್ಪತ್ತು ದಿನ ಇರುವಾಗಲೇ ಪ್ರದರ್ಶನಕ್ಕೆ ಊರಿನ ಬಯಲು ಪ್ರದೇಶವನ್ನು ಗುರುತಿಸಿ ಆ ಸ್ಥಳದಲ್ಲಿ ರಂಗಸಜ್ಜಿಕೆಯನ್ನು ನಿರ್ಮಾಣ ಮಾಡಿಕೊಳ್ಳಲಾಗುತ್ತಿತ್ತು. ಊರಿನ ಹಿರಿಯರ ಸಹಕಾರದೊಂದಿಗೆ ನಾಲ್ಕು ಕಲ್ಲುಕಂಬ ಅಥವಾ ಬಂಡಿಗಾಲಿಗಳನ್ನು ನೆಡುತ್ತಾರೆ. ಅದರ ಮೇಲೆ ಅಡ್ಡವಾಗಿ ದಪ್ಪನೆಯ ಕಟ್ಟಿಗೆಯ(ತೊಲೆ) ಕಂಬಗಳನ್ನು ಜೋಡಿಸುತ್ತಾರೆ. ಅದರ ಮೇಲೆ ಹಲಗೆಯನ್ನು ಬಳಸುತ್ತಾರೆ. ಮೂರು ಅಂಕಣ ಅಟ್ಟಕ್ಕೆ ಸುಮಾರು 30ಕ್ಕೂ ಹೆಚ್ಚು ಹಲಗೆಗಳು ಬೇಕಾಗುತ್ತವೆ. ಇಷ್ಟೊಂದು ಹಲಗೆಗಳನ್ನು ಸಂಗ್ರಹಿಸುವುದು ಕಷ್ಟವಾದ್ದರಿಂದ ಬಾಡಿಗೆ ಪಡೆದು ಅಟ್ಟ ನಿರ್ಮಾಣ ಮಾಡುತ್ತಾರೆ. ರಾಮಸಾಗರದ ಪಂಪಯ್ಯಸ್ವಾಮಿಯವರು ಬಯಲಾಟದ ಅಟ್ಟಕ್ಕೆ ಬೇಕಾಗುವ ಎಲ್ಲಾ ಸಾಮಗ್ರಿಗಳನ್ನು ಬಾಡಿಗೆ ಕೊಡುವ ವ್ಯವಸ್ಥೆಯನ್ನು ಮಾಡಿಕೊಂಡಿದ್ದರು. ಆದರೆ ಕಾಲಕ್ರಮೇಣ ಬಯಲಾಟ ಪ್ರದರ್ಶನ ಕಡಿಮೆಯಾದವು. ಹೀಗಾಗಿ ಅವರು ಕಳೆದ ಐದಾರು ವರ್ಷಗಳಿಂದ ಆ ಕಾಯಕವನ್ನು ನಿಲ್ಲಿಸಿದರು ಎಂದು ಜಡೆ ದೊಡ್ಡಬಸಪ್ಪನವರ ವಿಷಾದಿಸುತ್ತಾರೆ. ಹೀಗೆ ಆರಂಭದಲ್ಲಿ ವಿವಿಧ ಬಗೆಯ ಗ್ಯಾಸ್ ಲೈಟುಗಳನ್ನು ನಂತರ ಕಾಲಘಟ್ಟದಲ್ಲಿ

ISSN : 3048-7137

ವಿದ್ಯುತ್ ದೀಪಗಳನ್ನು ಮುದ್ದಾಪುರದ ಅಂಗಡಿ ಪಂಪಣ್ಣನವರು ಬಾಡಿಗೆ ಕೊಡುವ ಕಾರ್ಯಚಟುವಟಿಕೆಗಳನ್ನು ಮಾಡುತ್ತಿದ್ದರು. ಅವರ ನಂತರ ಅವರ ಮಗನಾದ ವೀರಭದ್ರಪ್ಪನವರು ಮುಂದುವರೆಸಿದರು. ಇವರು ಬರೀ ನಾಟಕಗಳಿಗೆ ಮಾತ್ರವಲ್ಲದೇ ವಿವಿಧ ಕಾರ್ಯಕ್ರಮಗಳಿಗೆ ಬಾಡಿಗೆ ನೀಡುತ್ತಿದ್ದರು. ಹೀಗೆ ಬಯಲಾಟಕ್ಕೆ ಬೇಕಾದ ಪರದೆಗಳನ್ನು, ಧ್ವನಿವರ್ಧಕಗಳನ್ನು ಹಾಗೂ ಕಿರೀಟ, ಬಿಲ್ಲು-ಬಾಣ, ಭುಜಕಿರೀಟ ಹಾಗೂ ಎದೆಹಾರ ದೊಡ್ಡ ಮೆರಗು. ಕೊರಳಲ್ಲಿ ಬಣ್ಣದ ಸರಗಳು, ಕೈಕಟ್ಟು, ನಡುಕಟ್ಟು, ಗೊಂಡೇವು, ಕೈಯಲ್ಲಿ ಖಡ್ಗ, ಗದೆ ಇವು ಪಾತ್ರಧಾರಿಗಳ ಸಲಕರಣೆಗಳು. ರಾಕ್ಷಸ, ರೌದ್ರ, ಪಾತ್ರಗಳಿಗೆ ಕುರಿ ಉಣ್ಣೆಯಿಂದ ಮೀಸೆ ಮಾಡಿರುತ್ತಾರೆ. ಹೀಗೆ ನಾಟಕಕ್ಕೆ ಬೇಕಾದ ಸಾಮಗ್ರಿಗಳನ್ನು ಬಾಡಿಗೆ ಕೊಡುವವರು ಕಡಿಮೆಯಾಗಿದ್ದಾರೆ ಎನ್ನುವ ಮಾತಿನಲ್ಲಿಯೇ ಬಯಲಾಟಗಳು ಕಡಿಮೆಯಾಗುತ್ತಿವೆ ಎನ್ನುವ ಧ್ವನಿ ಅವರದಾಗಿತ್ತು.

## ಆಟದ ಯಶಸ್ಸಿಗೆ ತೆರೆಮರೆ ಪಾತ್ರಗಳು

ಆಟದ ಯಶಸ್ಸಿಗೆ ತೆರೆಮರೆ ಪಾತ್ರಗಳು ಹೇಗೆ ಕಾರಣವಾಗುತ್ತವೆ ಎನ್ನುವುದಕ್ಕೆ ಜಡೆ ದೊಡ್ಡಬಸಪ್ಪನವರು ಹೀಗೆನ್ನುತ್ತಾರೆ. ದೊಡ್ಡಾಟದಲ್ಲಿ ಸಾರಥಿ ಪಾತ್ರ ಅತಿ ಮುಖ್ಯವಾದುದ್ದು. ಸಾರಥಿಯು ಇಡೀ ನಾಟಕದ ಪಾತ್ರಧಾರಿಗಳ ಪರಿಚಯ ಹಾಗೂ ಸಂಭಾಷಣೆ ಮಾಡುತ್ತಾನೆ. ಉದಾ: ಅರಮನೆಯಿಂದ ಸಭಾ ಮಂದಿರಕ್ಕೆ ಬಂದ ಕಾರಣವೇನು? ಎಂದು ಸಾರಥಿ ಕೇಳುವುದು ಅದಕ್ಕೆ ಪಾತ್ರವು... ತನ್ನ ಉದ್ದೇಶ ಹೇಳುವುದು ಹೀಗೆ ಸಾರಥಿಯು ಹಾಸ್ಯ, ವಿಡಂಬನೆಗಳ ಮೂಲಕ ಪಾತ್ರಧಾರಿಗಳಲ್ಲಿ ಮೆರಗನ್ನುಂಟುಮಾಡುತ್ತಾನೆ. ಬಯಲಾಟದಲ್ಲಿ ಪಾತ್ರಧಾರಿಗಳ ಸಂಭಾಷಣೆಗಳು ಸಂಗೀತ ಶೈಲಿಯಲ್ಲಿರುತ್ತದೆ. ಸಂಭಾಷಣೆಯು ಗದ್ಯ, ಪದ್ಯ, ಚಂಪೂ ಮಿಶ್ರಿತ ರೂಪದಲ್ಲಿರುತ್ತದೆ. ಹಳಗನ್ನಡ, ಸಂಸ್ಕೃತದ ಸಂಭಾಷಣೆ, ಹಾಡುಗಳು ಬಹಳ ಮುಖ್ಯವಾದವು. ಹೀಗಾಗಿ ಮೃದಂಗ, ಹಾರ್ಮೋನಿಯಂ ವಾದ್ಯಗಾರರು (ಸಂಗೀತ ಮಾಸ್ತರರು), ಮುಮ್ಮೇಳ-ಹಿಮ್ಮೇಳದವರು, ಕಥಾ ಸಂಚಾಲಕರು ಮುಂತಾದವರ ಚಾಣಾಕ್ಷತೆ, ಸಂದರ್ಭೋಚಿತ ತೀರ್ಮಾನ ಮುಂತಾದ ತಂತ್ರಗಾರಿಕೆಯ ಜೊತೆಗೆ ವೇಷಭೂಷಣಗಳು ಆಕರ್ಷಣೀಯವಾಗಿರುತ್ತದೆ. ಬಯಲಾಟದ ಶ್ರೀಮಂತಿಕೆ ಇರುವುದೇ ವೇಷಭೂಷಣದಲ್ಲಿ. ವೇಷ ಭೂಷಣ ಗಳನ್ನು ಆಧರಿಸಿಯೇ ಇದೇ ಪಾತ್ರ ಎಂದು ಹೇಳುವಷ್ಟು ಬಣ್ಣ ಮತ್ತು ವೇಷ ಭೂಷಣಗಳ ನಿರ್ದಿಷ್ಟತೆ ಕಾಣಸಿಗುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸಾದನ ಹಾಗೂ ವಸ್ತ್ರಾಲಂಕಾರ ಮುಂತಾದವು ನಾಟಕ ಯಶಸ್ವಿಗೆ ಪರೋಕ್ಷ ಕಾರಣಗಳಾಗಿವೆ.

## ಹಸಿರು ನಿಶಾನೆ ಕಲಾವಿದ

ಇಂದು ಗ್ರಾಮೀಣ ಮತ್ತು ನಗರ ಪ್ರದೇಶವೆಂಬ ಭೇದಭಾವವಿಲ್ಲದೆ ಎಲ್ಲಾ ಕಡೆ ರಂಗಭೂಮಿ ಜೀವಂತವಾಗಿದೆ. ಜನರಿಗಾಗಿ, ಜನರ ಮನರಂಜನೆಗಾಗಿ ಉದಯವಾದ ಕಲೆಯೇ ಬಯಲಾಟ. ಇದು ಬರೀ ಆಟವಲ್ಲ ಜನಮಾನಸದಲ್ಲಿ ಪ್ರಜ್ಞೆಯನ್ನು ಸೃಷ್ಟಿಸುವ ಸಾಧನವು ಹೌದು. ಪಾತ್ರಧಾರನು ಜನರಿಗೆ ಮನರಂಜನೆಯನ್ನು ನೀಡುತ್ತಲೇ ಸಂತೃಪ್ತ ಭಾವನೆಯನ್ನು ತಾಳುತ್ತಾನೆ. ಬಯಲಾಟದ ಕಲೆ ಹಣಕ್ಕಾಗಿ ಮಾಡುವುದಲ್ಲ, ಆತ್ಮತೃಪ್ತಿಗಾಗಿ ಮಾಡುವ ಕಲೆ, ನಮ್ಮ ಸಂಸ್ಕೃತಿ ಪರಂಪರೆಯನ್ನು ಉಳಿಸಿಬೆಳೆಸುವ ಕಲೆಯಷ್ಟೇ. ಇದು ಎಲ್ಲರಿಗೂ ತಿಳಿದ ವಿಚಾರವೇ ಆದರೂ ಜೇರ್ ನಂಜುಂಡಪ್ಪ, ತಳವಾರ ಕೆಂಚಪ್ಪ, ಜೇರ್ ಶಿವಲಿಂಗಪ್ಪ ಮೇಷ್ಟ್ರು, ವಿಟ್ಲಾಪುರ ಈರಣ್ಣ, ತಾವರಗೆರೆ ಯಲ್ಲಪ್ಪ ಮುಂತಾದ ಹಿರಿಯ ಕಲಾವಿದರ ಪ್ರಭಾವ–ಪ್ರೇರಣೆಯಿಂದ ಜನಪದ ರಂಗಭೂಮಿ ಪ್ರವೇಶಿಸಿದ ಜಡೆ ದೊಡ್ಡಬಸಪ್ಪನವರು 1994ರಲ್ಲಿ ಮುದ್ದಾಪುರದಲ್ಲಿ ಆಯೋಜನೆ ಗೊಂಡ 'ಗಿರಿಜಾ ಕಲ್ಯಾಣ' ನಾಟಕದಲ್ಲಿ ಮನ್ಮಥನ ಪಾತ್ರದಲ್ಲಿ ಅಭಿನಯಿಸಿ ಪ್ರೇಕ್ಷಕರಿಂದ 'ಹಸಿರು ನಿಶಾನೆ' ಕಲಾವಿದ ಎಂಬ ಹೆಗ್ಗಳಿಕೆ ಪಾತ್ರರಾದರು. ಈ ಕುರಿತು ಜಡೆ ದೊಡ್ಡಬಸಪ್ಪನವರು ಹೀಗೆನ್ನುತ್ತಾರೆ. ಮನ್ಮಥನ ಪಾತ್ರಧಾರಿಯಾದ ನಾನು ಸಭಾದ ಮಾತು ಹೇಳಿದ ನಂತರ ಅನಿರೀಕ್ಷಿತವಾಗಿ ಹಸಿರು ನಿಶಾನೆಯನ್ನು ನನ್ನ ಕಿರೀಟಕ್ಕೆ ಕಟ್ಟಿದರು. ಹಾಗಾಗಬಾರದಿತ್ತು, ನಾನು ಅಂಥ ದೊಡ್ಡ ಕಲಾವಿದನಲ್ಲ. ನನ್ನದು ಕಲಾಕ್ಷೇತ್ರಕ್ಕೆ ಅಳಿಲು ಸೇವೆಯಷ್ಟೇ, ಸಾಧಿಸಬೇಕಾದದ್ದು ಇನ್ನು ತುಂಬಾಯಿದೆ ಎನ್ನುತ್ತಾರೆ. ಎನಗಿಂತ ಕಿರಿಯರಿಲ್ಲ ಎನ್ನುವ ಬಸವಣ್ಣನವರ ಮಾತಿನಂತಿತ್ತು ಅವರ ಧ್ವನಿ.

## ಆಕರ ಗ್ರಂಥಗಳು


1. ರಂಗಭೂಮಿ ಸಂವಹನ, ಬಿ.ಪಿ.ಮಹೇಶ್ ಚಂದ್ರಗುರು, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 2015
2. ರಾಯಚೂರು ಜಿಲ್ಲೆಯ ಬಯಲಾಟಗಳು, ಹುಲುಗಪ್ಪ ಎಚ್,. ಬುದ್ದಿನ್ನಿ ಬಂಡಾರ ಪ್ರಕಾಶನ ಮಸ್ಕಿ, 2013
3. ಬಸವರಾಜ ಮಲಶೆಟ್ಟಿ: ಬದುಕು ಬರಹ, ಸಿಂಧು ಸಿದ್ದಾರ್ಥ ಪ್ರಕಾಶನ, ಬಳ್ಳಾರಿ, 2011

4. ಬಯಲಾಟದ ಲೇಖನಗಳು, ಶ್ರೀರಾಮ ಇಟ್ಟಣ್ಣವರ., ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ,2019

## ವಕ್ತೃಗಳ ವಿವರ

1. ಜಡೆ ದೊಡ್ಡಬಸಪ್ಪ, ಬಯಲಾಟ ಕಲಾವಿದರು, ವಯಸ್ಸು 67 ವರ್ಷ, ನಂ.10 ಮುದ್ದಾಪುರು
2. ಜೀರು ಮಲ್ಲಿಕಾರ್ಜುನ, ಕನ್ನಡ ಉಪನ್ಯಾಸಕರು, ವಯಸ್ಸು 48 ವರ್ಷ, ನಂ.10 ಮುದ್ದಾಪುರು
3. ಉಪ್ಪಾ ದೊಡ್ಡಬಸಪ್ಪ, ಬಯಲಾಟ ಕಲಾವಿದರು, ವಯಸ್ಸು 65 ವರ್ಷ, ನಂ.10 ಮುದ್ದಾಪುರು